# ಶಿಕ್ಷಣದ ಕ್ರಾಂತಿ ಕಿಡಿ
# ಶೋಷಿತರ ಬಾಳಿನ ಆಶಾಕಿರಣ
# ಸಮಾಜ ಸುಧಾರಕಿ ಮಾತೆ ಸಾವಿತ್ರಿ ಬಾಯಿ ಫುಲೆ

ದೇಶದ ಸರ್ವ ಪ್ರಥಮ ಮಹಿಳಾ ಶಿಕ್ಷಕಿ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕ್ರಾಂತಿಯನ್ನು ಉಂಟು ಮಾಡಿದರು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವುದಷ್ಟೇ ಅಲ್ಲ ಸಮಾಜದಲ್ಲಿನ ಅನಿಷ್ಟ ಕಟ್ಟು ಪಾಡು ದಬ್ಬಾಳಿಕೆಗೆ ಒಳಗಾದವರನ್ನು ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸಿದ ಮಹಾನ್ ಹೋರಾಟಗಾರ್ತಿ ತಮ್ಮಲ್ಲಿರುವ ಮಾನವಿಯತೆ ಜ್ಞಾನ ಸದ್ಗುಣಗಳನ್ನು ಸಮಾಜದ ಒಳತಿಗಾಗಿ ಸೇವೆಗಾಗಿ ಮುಡುಪಾಗಿಟ್ಟ ಮಹಾನ್ ಮಾನವತಾವಾದೀ ಉತ್ತಮ ಶಿಕ್ಷಕಿಯಾಗುವುದರ ಜೊತೆಗೆ ಜನರಲ್ಲಿ ಸಾಕ್ಷರತೆಯ ಕಿರಣವನ್ನು ಮೂಡಿಸುವಲ್ಲಿ ಯಶಸ್ವಿಯಾವ ಮಹಿಳಾ ಶಿರೋಮಣಿ, ಮುಂದೆ ಇಟ್ಟ ಹೆಜ್ಜೆಯನ್ನು ಹಿಂದೆ ಇಡದ ಛಲಗಾರ್ತಿ ಉತ್ತಮ ಕವಯತ್ರಿ ಮತ್ತು ಮೊದಲ ಮಹಿಳಾ ಕವಯತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಜಾತಿ ಬೇಧ ಕೆಳಜಾತಿಯವರ ಬಡ ಹೆಣ್ಣು ಮಕ್ಕಳ ವಿಧವೆಯರ ಪಾಲಿನ ಆಶಾಕಿರಣವಾದವರು, ಶ್ರೇಷ್ಠ ಮಾನವತಾವಾದೀ ತಮ್ಮದೇ ಆದ ಸ್ವಂತ ವಿಚಾರಗಳಿಗೆ ಸಮಾಜದಲ್ಲಿರುವ ತಾರತಮ್ಯ ಹೋಗಲಾಡಿಸಲು ಪ್ರಯತ್ನಿಸಿದ ಛಲಗಾರ್ತಿ ತಮ್ಮ ಜೀವಿತಾವಧಿಯನ್ನು ಬಡವರ ಕೆಳವರ್ಗದವರ ಶೋಷಿತರ ಏಳಿಗೆಗಾಗಿ ದುಡಿದವರು ಇಂಗ್ಲೀಷ್‌ನಲ್ಲಿಯೂ ಕೂಡಾ ಜ್ಞಾನ ಸಂಪಾದನೆ ಮಾಡಿದವರು ವೈಯಕ್ತಿಕ ಬದುಕಿನಲ್ಲಯೂ ಕೂಡಾ ಆದರ್ಶನಾರಿಯಾಗಿದ್ದರು. ಜ್ಯೋತಿ ಬಾ ಫುಲೆಯವರು ಶಿಕ್ಷಣ ಪ್ರೇಮ, ಮಾರ್ಗದರ್ಶನ, ಸಹಕಾರವನು ಮೈಗೂಡಿಸಿಕೊಂಡಿದ್ದರು. ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಶಿಕ್ಷಣ ತಜ್ಞೆ ಮಹಾನ್ ಸಮಾಜ ಸುಧಾರಕಿ, ಭೀಕರ ಬರಗಾಲ ಸಂದರ್ಭದಲ್ಲಿ ದಿಟ್ಟನಾರಿಯಂತೆ ಸತ್ಯಶೋಧಕ ಸ್ವಯಂ ಸೇವಕರೊಂದಿಗೆ ಸೇರಿ ಆಹಾರ ಧಾನ್ಯ ಪೂರೈಸಿದ ಅನ್ನದಾತೆ ಸ್ತ್ರೀವಿಮೋಚನೆಗೆ ಕಟಿಬದ್ಧರಾಗಿದ್ದರು ಕರ್ತವ್ಯವೇ ದೇವರೆಂದು ನಂಬಿದ್ದರು ನಿಮ್ಮ ಮಕ್ಕಳಿಗೆ ಮೂಲಭೂತವಾಗಿ ಶಿಕ್ಷಣ ಸೌಕರ್ಯ ನೀಡಿದಾಗ ನೀವು ಉತ್ತಮ ಸಮಾಜ ನಿರ್ಮಿಸಲು ಸಾಧ್ಯವೆಂದರು ಇವರ ಆತ್ಮ ವಿಶ್ವಾಸ, ಧೈರ್ಯ, ಇವರು ಶಿಕ್ಷಣ ಕ್ಷೇತ್ರದಲ್ಲಿ ಇಟ್ಟ ದಿಟ್ಟ ಹೆಜ್ಜೆಗಳಿಂದ ಬ್ರಿಟಿಷ್ ಸರ್ಕಾರ ಇವರ ಸೇವೆ ತ್ಯಾಗ ಸೇವಾಮನೋಭಾವನೆಯನ್ನು ಪರಿಗಣಿಸಿ ದೇಶದ ಮೊದಲ ಮಹಿಳಾ ಶಿಕ್ಷಕಿ ಎಂದು ಗೌರವಿಸಿದ್ದಾರೆ.

**ಜನನ :–** ಸಾವಿತ್ರಿಬಾಯಿಯವರು ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಒಂದು ಚಿಕ್ಕ ಹಳ್ಳಿಯಾದ ನಯಗಾಂವ್‌ನಲ್ಲಿ 1831 ಜನವರಿ 3 ರಂದು ಜನಸಿದರು ತಂದೆ ಖಂಡೋಜಿನಾವಸೆ ಪಾಟೀಲ್ , ತಾಯಿ ಲಕ್ಷ್ಮೀಬಾಯಿ.

**ಬೆಳೆದ ಪರಿಸರ :–** 1800ನೇ ಇಸ್ವಿಯಲ್ಲಿ ಹೆಣ್ಣು ಮಕ್ಕಳ ಹಾಗೂ ಬಡವರು ಕೆಳವರ್ಗದ ಜನರು ಶಾಲೆಗೆ ಹೋಗುತ್ತಿರಲಿಲ್ಲಿ. ಆಗ ಶಾಲೆಗಳು ಕೂಡಾ ಅವರಿಗಾಗಿ ಇರುತ್ತಿರಲಿಲ್ಲಿ ಆಗ ಶಾಲೆಗಳು ಕೂಡಾ ಹೆಚ್ಚಿಗೆ ಇರುತ್ತಿರಲ್ಲಿ ದೂರ ಊರುಗಳಿಗೆ ಅಲ್ಲೊಂದು ಇಲ್ಲೊಂದು ಶಾಲೆಗಳು ಮಾತ್ರ ಇರುವ ದಿನಗಳಾಗಿದ್ದವು

**ವಿವಾಹ ಮತ್ತು ಜ್ಯೋತಿಬಾ ಫುಲೆಯವರ ಮನೆಯ ಹಿನ್ನಲೆ :–** ಸಾವಿತ್ರಿಬಾಯಿಯವರಿಗೆ 9 ವರ್ಷವಿದ್ದಾಗ 13 ವರ್ಷದ ಜ್ಯೋತಿಬಾಫುಲೆಯವರೊಂದಿಗೆ 1840 ರಲ್ಲಿ ವಿವಾಹ ನಡೆಯಿತು ಜ್ಯೋತಿವಾ ಫುಲೆಯವರ ತಂದೆ ಗೋವಿಂದ ಫುಲೆ ತಾಯಿ ಚಿಮಣಾಬಾಯಿ ಪುಣೆಯಲ್ಲಿ ಸ್ವಂತ ಅಂಗಡಿಯನ್ನಿಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದರು. ಮದುವೆಯ ನಂತರ ಸಾವಿತ್ರಿ ಬಾಯಿಯವರು ಸಾವಿತ್ರಿಬಾಯಿ ಫುಲೆ ಎಂದಾದರು.

ಜ್ಯೋತಿಬಾಫುಲೆಯವರು ಚಿಕ್ಕರಿರುವಾಗ ತಾಯಿ ತೀರಿಕೊಂಡರು. ಇವರನ್ನು ಸುಗುಣಾ ಬಾಯಿ ಕ್ಷೀರಸಾಗರ ಎಂಬುವವರು ಸಾಕಿ ಇವರಿಗೆ ಶಿಕ್ಷಣ ಓದು ಬರಹದೊಂದಿಗೆ ಇಂಗ್ಲೀಷ್ ಹೇಳಿ ಕೊಟ್ಟರು. ಸುಗುಣಾಬಾಯಿಯವರು ಜ್ಯೋತಿಬಾಫುಲೆಯವರಿಗೆ ಬಡವರ ಅನಕಂಪ ದಯ, ಪ್ರೀತಿ, ವ್ಯಾತ್ಸಲ್ಯ ಕಾಳಜಿ ಮೂಡುವಂತೆ ಮಾಡಿದ ಮಹಾನ್ ತಾಯಿಯಾದರು.

**ವೈವಾಹಿಕ ಜೀವನ :-** 9 ನೇ ವಯಸ್ಸಿಗೆ ಮದುವೆ ಆದ ನಂತರ ಗಂಡನ ಮನೆ ಸೇರಿದ ಸಾವಿತ್ರಿಬಾಯಿ ಫುಲೆಯವರಿಗೆ ಓದು ಬರಹ ಗೊತ್ತಿರಲಿಲ್ಲ. ಆದರೆ ಅವರು ಜ್ಯೋತಿಬಾಫುಲೆಯವರ ವ್ಯಕ್ತಿತ್ವದಿಂದ ಪ್ರಭಾವಿತರಾದರು ಸಾವಿತ್ರಿಬಾಯಿಯವರಿಗೆ ಓದಿನ ಆಸಕ್ತಿ ಕಂಡು ಜ್ಯೋತಿಬಾಫುಲೆಯವರು ಅವರು ಅವರಿಗೆ ಪಾಠ ಹೇಳಿಕೊಡಲು ಪ್ರಾರಂಭಿಸಿದರು. ಆದರೆ ಜ್ಯೋತಿ ಬಾ ರವರು ಮನೆಯ ತೋಟದಲ್ಲಿ ಕೆಲಸ ಮಾಡುತ್ತಿದ್ದರು ಆಗ ಸುಗುಣಾಬಾಯಿ ಅವರು ಇವರನ್ನು ಓದಲು ಪುಣೆಯ ಸ್ಕಾಟಿಷ್‌ಮಿಶನ್ ಶಾಲೆಗೆ ಸೇರಿಸಿದರು ಅಲ್ಲಿ ಅವರಿಗೆ ಹಲವಾರು ಗ್ರಂಥಗಳು ಓದಲು ದೊರಕಿದವು **"**ಮಾನವನ ಹಕ್ಕುಗಳು**"** ಕೃತಿಯು ಹೆಚ್ಚು ಪ್ರಭಾವ ಬೀರಿತು.

ಜ್ಯೋತಿಬಾಫುಲೆಯವರು ತಮ್ಮ ಸುತ್ತಲು ನಡೆಯುವ ಸಾಮಾಜಿಕ ಮೂಢ ನಂಬಿಕೆ ಬಡವರು, ಮಹಿಳೆಯರ ಮೇಲಿನ ದೌರ್ಜನ್ಯವನ್ನು ನೋಡಿ ತಾವು ಸಮಾಜದ ಒಳತಿಗಾಗಿ ದುಡಿಯಬೇಕು ಎಂಬ ಇಚ್ಛೆ ಮೂಡಿತು. ತಮ್ಮ ಪತ್ನಿಯನ್ನು ಜೊತೆಗೂಡಿಸಿಕೊಂಡು ಮುನ್ನಡೆದರು ಸಮಾಜದ ಕೆಳ ಹಂತದದರ ದೈನ್ಯ ಸ್ಥಿತಿ, ವಿಧವೆಯರ ಸತಿ, ಪದ್ಧತಿ, ಗುಲಾಮಗಿರಿ, ಲೈಂಗಿಕ ಶೋಷಣೆ ಬಾಲ್ಯವಿವಾಹದ ವಿರುದ್ಧ ಸಿಡಿದೆದ್ದರು. ಇದು ಶಿಕ್ಷಣದಿಂದ ಮಾತ್ರ ಸಾಧ್ಯವೆಂದರು, ಜ್ಯೋತಿಭಾಫುಲೆಯವರ ಇಚ್ಛೆಯಂತೆ ಸಾವಿತ್ರಿ ಬಾಯಿ ಶಾಲೆಗೆ ಸೇರಿ 1841 ರಿಂದ 1846 ರವರಗೆ ಶಿಕ್ಷಣ ಪಡೆದರು ಶಿಕ್ಷಕಿ ತರಬೇತಿ ಕೊಡಿಸಿದರು. ಸಮಾಜದಲ್ಲಿ ದಲಿತ ಮಹಿಳೆಯರ ಮೇಲೆ ಆಗುತ್ತಿರುವ ಅನ್ಯಾಯ ಕಂಡು ಅದರ ವಿರುದ್ಧ ಸಿಡಿದೆದ್ದರು 1847 ರಲ್ಲಿ ಮಹಾರವಾಡ ಮೇ 11 ರಂದು ದಲಿತ ಹೆಣ್ಣು ಮಕ್ಕಳಿಗಾಗಿ " ಅಹಿಲ್ಯಾಶ್ರಮ : ಶಾಲೆ ತೆರೆದರು 1847ರಲ್ಲಿ ಇಲ್ಲಿ ಶಿಕ್ಷಕಿಯಾಗಿ ತಮ್ಮ ಕೆಲಸವನ್ನು ಮಾಡಲು ಪ್ರಾರಂಭಿಸಿದರು

ಹೆಣ್ಣು ಮಕ್ಕಳಿಗೆ ಪಾಠ ಹೇಳಿಕೊಡಲು ಮುಂದಾದಾಗ ಇವರಿಗೆ ಸಗಣಿ ನೀರು, ಮೊಟ್ಟೆ, ಕೊಳತೆ ತತ್ತಿ, ಕೆಸರು ಎರಚಿ ಅವಮಾನಗೊಳಿಸುತ್ತಿದ್ದರು, ಆದರೆ ಸಾವಿತ್ರಿಬಾಯಿಯವರು ಯಾವುದಕ್ಕೂ ಹೆದರದೆ ತಮ್ಮ ಚೀಲದಲ್ಲಿ ಇನ್ನೊಂದು ಸೀರೆ ಒಯ್ಯುತ್ತಿದ್ದರು ಅದನ್ನು ಬದಲಿಸಿ ಪಾಠ ಹೇಳಿಕೊಡುತ್ತಿದ್ದರು. ಇದರಿಂದ ಮೇಲು ಜಾತಿ ಹಾಗೂ ಸಮಾಜದವರನ್ನು ಎದುರು ಹಾಕಿಕೊಳ್ಳಬೇಕಾಯಿತು ಶೂದ್ರರಿಗೆ ಶಿಕ್ಷಣ ನೀಡಿ ಸಮಾಜವನ್ನು ಹಾಳು ಮಾಡುತ್ತಿದ್ದಾರೆ ಎಂಬ ಕಳಂಕ ಬಂದಿತು. ಹಾಗಾಗಿ ಆ ಶಾಲೆಯನ್ನು ಮುಚ್ಚುವ ಪ್ರಸಂಗ ಎದುರಾಯಿತು ಎಲ್ಲಾ ಹೆಣ್ಣು ಮಕ್ಕಳಿಹೆ ಶಾಲೆ ತೆರೆಯಬೇಕೆಂದು ಯೋಚಿಸಿ ಅದಕ್ಕಾಗಿ ತಕ್ಕ ತರಬೇತಿಯನ್ನು ಅಹಮದ್ ನಗರದ ಶ್ರೀಮತಿ ಮಿಚಲ್‌ತವರ ನಾರ್ಮಲ್ ಶಾಲೆಯಲ್ಲ ತರಬೇತಿ ಪಡೆದರು ಇದು ಕೂಡಾ ಸಮಾಜದ ಕೆಂಗಣ್ಣಿಗೆ ಗುರಿಯಾಯಿತು ಮತ್ತು ಮನೆಯವರು ಸಹ ಸಮಾಜದ ಕಟ್ಟು ಪಾಡುಗಳಿಗೆ ಬೆಂಡಾಗಿ ಸಾವಿತ್ರಿಬಾ ಫುಲೆಯವರು ಶಾಲೆಯಲ್ಲಿ ಪಾಠ ಹೇಳುವುದನ್ನು ಕೂಡಾ ವಿರೋಧಿಸಿದರು ಆದರೆ ಜ್ಯೋತಿಬಾಫುಲೆಯವರ ಸಹಕಾರದೊಂದಿಗೆ ಫಾತೀಮಾ ಶೇಕ್ ಅವರು ತರಬೇತಿಯನ್ನು ಮುಗಿಸಿದರು ಎಂಬುದನ್ನು ಮರೆಯುವಂತಿಲ್ಲಿ

ಶ್ರೀ ಭಿಡೆಯವರ ಭವನದಲ್ಲಿ 1848 ಜನವರಿಯಲ್ಲಿ ಕನ್ಯಾಶಾಲೆ ಪ್ರಾರಂಭವಾಯಿತು ಈ ಸಂಸ್ಥೆ ಸ್ಥಳೀಯ ವ್ಯಕ್ತಿಗಳಿಂದ ಪ್ರಾರಂಭವಾಯಿತು ಎಂಬ ಹೆಗ್ಗಳಿಕೆ ಪಾತ್ರವಾಯಿತು. ಇಲ್ಲಿ ಸಾವಿತ್ರಿಬಾಯಿ ಫುಲೆಯವರ ಯಾವ ವೇತನವನ್ನು ಪಡೆಯದೆ ಅಕ್ಷರ ಜ್ಞಾನ ನೀಡಿದ ಮಹಾನ್ ಮಹಿಳೆಯಾದರು ಬದಲಿಗೆ ಜ್ಯೋತಿಬಾಫುಲೆಯವರು ದುಡಿದು ಮನೆಗೆ ಮತ್ತು ಸಾವಿತ್ರಿಬಾಯವರಿಗೆ ಹಣ ಕಳಿಸುತ್ತಿದ್ದರು.

ಈ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕೆ ಒತ್ತು ಕೊಡಲಾಯಿತು, ಇದರಿಂದಾಗಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ದೊರೆಯಿತು ಇಷ್ಟಾದರೂ ಸಾವಿತ್ರಿಬಾಯಿಯವರಿಗೆ ನಿಂದನೆಗಳು ಬೈಗುಳಗಳು ನಿಲ್ಲಲಿಲ್ಲ ಆದರೆ ಇದನ್ನೆಲ್ಲವನ್ನೂ ಶಾಂತ ರೀತಿಯಿಂದ ಸ್ವೀಕರಿಸಿದರು. ತಮ್ಮ ಕೆಲಸಗಳನ್ನುನ ಮನಸಾರೆ ಮಾಡುತ್ತಿದ್ದರು. ಆಸ್ಪೃಶ್ಯರಿಗೆ ಮತ್ತು ಮಹಿಳೆಯರಿಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟರು ಮುಂದೆ ಮುಖ್ಯೋಪಾಧ್ಯಾಯನಿಯಾಗಿ ಸೇವೆ ಸಲ್ಲಿಸಿದರು.

1851 ಜುಲೈ 3 ರಂದು ಪುಣೆಯ ಅಣ್ಣಸಾಹೇಬ ಟಪಳೂಣಕರ ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಕನ್ಯಾಪಾಠ ಶಾಲೆ ಪ್ರಾರಂಭಿಸಿದರು. 1848 ರೀಂದ 1852 ರವರೆಗೆ ಒಟ್ಟು 18 ಶಾಲೆಗಳು ಪ್ರಾರಂಭಗೊಂಡವು ಅದರಲ್ಲಿ ದಳಿತ ಬಾಲಕ ಮತ್ತು ಬಾಲಕಿಯರಿಗಾಗಿ ರಾತ್ರಿ ಶಾಲೆ ರೈತರಿಗಾಗಿ, ಸ್ತ್ರೀಯರಿಗಾಗಿ ಪ್ರತ್ಯೇಕ ಶಾಲೆಗಳ ಆರಂಭಗೊಂಡವು. ಇವರ ಸೇವೆಯನ್ನು ಪರಿಗಣಿಸಿ ನವೆಂಬರ 16 ರಂದು 1852 ರಲ್ಲಿ ಇವರನ್ನು ಸನ್ಮಾನಿಸಿಗೌರವಿಸಲಾಯಿತು. 1852 ರಲ್ಲಿ ಸರಕಾರದ ಶಿಕ್ಷಣ ಇಲಾಖೆ ಇವರನ್ನು ಗೌರವಿಸಿದರು 12 ಪೆಬ್ರುವರಿ 1853ರಲ್ಲಿ "ಉತ್ತಮ ಶಿಕ್ಷಕಿ ಎಂಬ ಬಿರುದು ನೀಡಿ ಗೌರವಿಸಲಾಯಿತು.

ಸ್ತ್ರೀಯರಿಗಾಗಿ ಕಟ್ಟುಪಾಡುಗಳು ವಿಧವೆಯರು ಎದುರುಸುತ್ತಿರುವ ಸಮಸ್ಯೆಗಳನ್ನು ಕಂಡು ಮರುಗಿದರು. ಸ್ತ್ರೀಯರು ಸಮಾಜದ ಯಾವ ಕ್ಷೇತ್ರಗಳಲ್ಲಿಯೂ ಕಾಣಿತ್ತಿರಲಿಲ್ಲ. ಹೀಗಾಗಿ ಅವರಿಗೆ ಸಾಮಾಜಿಕ ಜಾಗೃತಿ ಮೂಡಿಸಲು 1852 ರಲ್ಲಿ **"ಮಹಿಳಾ ಸೇವಾ ಮಂಡಳಿ"** ಯನ್ನು ಸ್ಥಾಪಿಸಿದರು.

ಜಾತಿ, ಮತ, ಮೇಲು, ಕೀಳು, ಬೇಧ-ಭಾವ ತೊರೆದು ಸಮಾಜದಲ್ಲಿ ಹೊಸ ಕ್ರಾಂತಿಯನ್ನು ಮೂಡಿಸಿದರು. ಗಂಡನನ್ನು ಕಳೆದುಕೊಂಡ ಹೆಣ್ಣು ಮಕ್ಕಳನ್ನು ವಿರುಪಗೊಳಿಸುವ ಪದ್ದತಿಗೆ ವಿರೋಧ ಒಡ್ಡಿದರು. 18 ಜನವರಿ 1853 ರಲ್ಲಿ "ಬಾಲ್ಯ ಹತ್ಯಾ ನಿಷೇಧ ಪ್ರಸೂತಿ ಗ್ರಹ" ಪ್ರಾರಂಭಿಸಿದರು. ಹೆಣ್ಣು ಮಕ್ಕಳನು ಹೆತ್ತು ತಮಗೆ ಬೇಡವಾದರೆ ಈ ಸಂಸ್ಥೆಯಲ್ಲಿ ಬಿಡಬಹುದು ಎಂದರು ಮತ್ತು ಅದರ ಸಂಪೂರ್ಣ ಜವಾಬ್ದಾರಿಯನ್ನು ದಂಪತಿಗಳು ವಹಿಸಿಕೊಂಡರು. ಬಾಲ್ಯವಿವಾಹ ಕೇಶಮುಂಡನೆ ವಿರುದ್ಧ ಹೋರಾಡಿದರು , ದಲಿತರ ಕೇರಿಗಳಲ್ಲಿ ಹೋಗಿ ಶಿಕ್ಷಣ ಕೊಡಲು ಮುಂದಾದರು ದಲಿತರಿಗೆ ಕುಡಿಯವ ನೀರಿನ ಸಮಸ್ಯೆಯನ್ನು ಕಂಡು ನೀರನ್ನು ತಮ್ಮ ಮನೆಯಿಂದ ತೆಗೆದುಕೊಂಡು ಹೋಗಲು ಹೇಳಿದರು ಇದಕ್ಕಾಗಿ ಸಮಾಜದಿಂದ ಬೆದರಿಕೆಗಳು ಬಂದರೂ ಅವರೂ ತಮ್ಮ ಸೇವೆಯನ್ನು ಮುಂದುವರಿಸಿದರು ಒಂದು ಸಾರಿ ಇವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು.

ತಮ್ಮ ಬರವಣಿಗೆಯ ಮೂಲಕ ಸಮಾಜದಲ್ಲಿನ ಜನರಿಗೆ ಶಿಕ್ಷಣದ ಮಹತ್ವ ಸಾರಿದರು. 1854 ರಲ್ಲಿ "ಕಬ್ಬ ಫುಲೆ" ಮೊದಲ ಕವನ ಸಂಕಲನ ಪ್ರಕಟವಾಯಿತು. ಸಾವಿತ್ರಿಬಾಯಿ ಫುಲೆ ಸಮಗ್ರ ವಾಙ್ಮಯ ಎಂಬ ಪುಸ್ತಕದಲ್ಲಿ ಜ್ಯೋತಿಬಾ ಫುಲೆಯವರಿಗೆ ಬರೆದ ಪತ್ರಗಳು ಇವೆ. ದಂಪತಿಗಳು ಸಮಾಜದಲ್ಲಿ ನಡೆಯುವ ಕೆಲವು ವಿಷಯಗಳ ಬಗ್ಗೆ ಪತ್ರಗಳಲ್ಲಿ ಬರೆಯುತ್ತಿದ್ದರು ಮತ್ತು ಅವರು

ಸಮಾಜದ ಬಗ್ಗೆ ಇದ್ದ ಕಾಳಜಿ ಮತ್ತು ಅನ್ಯೋನ್ಯ ದಾಂಪತ್ಯ ಸಹಕಾರ ಮನೋಭಾವನೆ ಕುರಿತು ತಿಳಿಯುತ್ತದೆ.

ಹಲವಾರು ಸಾರ್ವಜನಿಕ ಸಭೆಗಳಲ್ಲಿ ಉಪನ್ಯಾಸ ನೀಡುವುದರ ಮೂಲಕ ಮಹಿಳೆಯರು ಏಕತೆ ಮತ್ತು ಜಾಗೃತಿ ಮತ್ತು ಉತ್ತಮ ನಡುವಳಿಕೆ ಇತ್ಯಾದಿಗಳ ಬಗ್ಗೆ ಹೇಳುತ್ತಿದ್ದರು. ಸಾವಿತ್ರಿಬಾಯಿಯವರು ಸತ್ಯಶೋಧಕ ಸಮಾಜದಲ್ಲಿ ದುಡಿದರು ದಂಪತಿಗಳಿಗೆ ಮಕ್ಕಳಿರಲಿಲ್ಲ ಕಾಶಿಬಾಯಿ ಎನ್ನುವ ವಿಧವೆ ಮಹಿಳೆಯ ಹೆರಿಗೆಯ ನಂತರ ಆ ಮಗುವನ್ನು ದತ್ತು ಪಡೆದರು ಆತನಿಗೆ ಯಶವಂತ ಎಂದು ಹೆಸರಿಟ್ಟು ಉತ್ತಮ ಸಂಸ್ಕಾರ, ವಿದ್ಯಾಭ್ಯಾಸ ನೀಡುವ ಮುಖಾಂತರ ಆತನಿಗೆ ವೈದ್ಯನನ್ನಾಗಿ ಮಾಡಿ ಸಮಾಜದ ಸೇವೆಯಲ್ಲಿ ತೊಡಗಿಸಿದರು. 1860 ಬ್ರಾಹ್ಮಣ ವಿಧುರ ಮತ್ತು ಬ್ರಾಹ್ಮಣ ವಿಧವೆಗೆ ಮಾರ್ಚ 3 ರಂದು ಮದುವೆ ಮಾಡಿ ಕ್ರಾಂತಿಯನ್ನು ಮಾಡಿದರು.

1890 ರಲ್ಲಿ ಜ್ಯೋತಿಬಾಫುಲೆಯವರು ದೇಹತ್ಯಾಗ ಮಾಡಿದರು ಅದಾದ ನಂತರ ಸಾವಿತ್ರಿ ಬಾಯಿಯವರು ಸುಮ್ಮನೆ ಕೂಡದೆ ಸಾಮಾಜಿಕ ಸೇವೆಯನ್ನು ಮುಂದುವರೆದಿದರು 1876 ರ ಭೀಕರ ಬರಗಾಲದ ಸಂದರ್ಭದಲ್ಲಿ ಊರುರು ಅಲೆದಾಡಿ ಹಣ ಸಂಗ್ರಹಿಸಿ ಜನರಿಗೆ ಸಹಾಯ ಹಸ್ತ ಚಾಚಿದರು 1896 ರಲ್ಲಿ ಪ್ಲೇಗ್ ಮಹಾಮಾರಿ ಹರಡಿತು ತಮ್ಮ ದತ್ತು ಪುತ್ರ ಯಶವಂತರವರ ರೊಂದಿಗೆ ರೋಗಿಗಳ ಸೇವೆಯನ್ನು ಪ್ರಾಣದ ಹಂಗು ತೊರೆದು ಹೋರಾಡಿದರು. ಹೀಗೆ ಪ್ಲೇಗ್ ರೋಗಿಗಳ ಸೇವೆಯಲ್ಲಿರುವಾಗಲೇ ಅವರಿಗೆ ಪ್ಲೇಗ್ ರೋಗ ಅಂಟಿಕೊಂಡಿತು ಅವರು 1897 ಮಾರ್ಚ 10 ರಂದು ನಮ್ಮನ್ನು ಅಗಲಿದರು.

ಹೊಸ ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದರು ನಮ್ಮ ಅಕ್ಷರದ ಅವ್ವ , ಅಕ್ಷರದ ಕ್ರಾಂತಿಯ ಕಿಡಿ ಸಾವಿತ್ರಿವಾಯಿ ಘುಲೆಯವರ ಜೀವನವೇ ಇಂದು ಇತಿಹಾಸ ದಬ್ಬಾಳಿಕೆಗೆ ಒಳಗಾದವರನ್ನು ಎಚ್ಚರಿಸಿದ ಮಹಾನ್ ನಾಯಕಿ

- ❖ ಕಾವ್ಯಫುಲೆ (1984) ಕಾವ್ಯಸಂಗ್ರಹ ಕಬ್ಬಫುಲೆ
- ❖ ಭವನಕಾಶಿ ಪುಟೋಧರತ್ನಾಕರ (ಆತ್ಮಕಥನ ) 1891
- ❖ ಜ್ಯೋತಿಬಾಫುಲೆಯವರಿಗೆ ಬರೆದ 3 ಪತ್ರ
  ದಿನಾಂಕ : 10–10–1856
  ದಿನಾಂಕ : 29–08–1868
  ದಿನಾಂಕ : 20–04–1877
- ❖ ಜ್ಯೋತಿವಾ ಅವರ ಭಾಷಣಗಳು (ಸಂಪಾದನೆ 1892)
- ❖ ಕರ್ಜೆ – ಪ್ರಬಂಧ

ಅವರ ನಡೆ–ನುಡಿ ಸ್ತ್ರೀಯರ ಮೇಲಿದ್ದ ಕಾಳಜಿಯನ್ನು ನೋಡಿದಾಗ ಇವರೊಬ್ಬ ಅತ್ಯದ್ಭುತ ಸಾಮಾಜಿಕ ಹೋರಾಟಗಾರ್ತಿಯಾಗಿ ನಮ್ಮ ಮುಂದೆ ನಿಲ್ಲುತ್ತಾರೆ ಮನುಷ್ಯನ ನಿಜವಾದ ಆಭರಣವೆಂದರೆ ಅದು ಶಿಕ್ಷಣ ಎಂದು ಹೆಳಿ ಸಮಾಜದಲ್ಲಿ ಸ್ಥಾನ –ಮಾನ –ಧನ ಎಲ್ಲವೂ ಶಿಕ್ಷಣದಿಂದ ಪ್ರಾಪ್ತಿಯಾಗುತ್ತದೆ. ಎಂಬ ಸಂದೇಶ ಸಾರಿದರು. ಶೋಷಿತರ ಧ್ವನಿಯಾಗಲೆಂದು ಇವರು ಭಾರತದಲ್ಲಿ ಜನಿಸಿದ್ದಾರೆ ಎಂದು ಹಲವರು ಅಭಿಪ್ರಾತ ಪಟ್ಟಿದ್ದಾರೆ.

ಪುರಷ ಪ್ರಧಾನ ಸಮಾಜವನ್ನು ಧೈರ್ಯದಿಂದ ಎದುರಿಸಿ ತಮ್ಮ ಜೀವನದ ಉದ್ದಕ್ಕೂ ಪತಿಯೊಂದಿಗೆ ಸಮಾಜ ಸೇವೆ ಮಾಡಿದ ಈ ತಾಯಿಯ ಸಾಧನೆಗೆ ಮಿಗಿರಾದದ್ದು ಸರಿಸಮಾನದದ್ದು  ಯಾವುದೂ ಇಲ್ಲ

ಇವರ ಅನನ್ಯ ಸೇವೆ ಶಿಕ್ಷಣ ಸಮಾಜ ಸುಧಾರಣೆ, ತ್ಯಾಗ, ಸ್ತ್ರೀಯರ ಬಗ್ಗೆ ಇರುವ ಕಾಳಜಿ ಸೇವೆ ಪ್ರಗತಿ ಪರ ಸಮಾಜವನ್ನು ನಿರ್ಮಿಸಲು ಅವರ ಕಾರಣವಾದ ಇವರ ಸೇವೆಯನ್ನು ಪರಿಗಣಿಸಿ ಇವರ ಜನ್ಮದಿನವಾದ ಜನವರಿ 3 ರಂದು ಜಯಂತಿಯನುನ ಆಚರಿಸುಚುದರ ಮೂಲಕ ಅವರ ತತ್ವ ಆದರ್ಶಗಳನ್ನು ಪಾಲಿಸೋಣ ನಮ್ಮ ಕೈಲಾದ ಮಟ್ಟಿಗೆ ಶಿಕ್ಷಣ ಸಮಾಜ ಸೇವೆಯಲ್ಲಿ ತೊಡಗಿದಾಗ ಮಾತ್ರ ಅವರಿಗೆ  ನೀಡುವ ನಿಜವಾದ ಗೌರವವನ್ನು ನೀಡಿದಂತಾಗುತ್ತದೆ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ.